ಆಗಷ್ಟೇ ಸಣ್ಣ ಮಳೆ ಬಂದು ಹೋಗಿತ್ತು. ಪಕ್ಕದಲ್ಲಿ ಇದ್ದ ಅಂಗಡಿ, ದೇವಸ್ಥಾನ, ಬಜ್ಜಿ ಅಂಗಡಿ ಮುಚ್ಚುವ ಹೊತ್ತಾಗಿತ್ತು. ನಾಲ್ಕು ಚಕ್ರದ ವಾಹನದಲ್ಲಿ ದೋಸೆ ಚಾಟ್ ಅಂಗಡಿ ಇಟ್ಟವರು ಇಂದು ಉಪಯೋಗಿಸಿದ ಪಾತ್ರೆಗಳನ್ನೆಲ್ಲ ತೊಳೆಯುತ್ತಿದ್ದರು. ಅಲ್ಲಲ್ಲಿ ಮನೆಯ ಹೆಂಗಸರು ಮರುದಿವಸ ಬರುವ ಕಾರ್ಪೊರೇಶನ್ನಿನವರಿಗೆ ಬೆಳಗಿಂದ ಮಾಡಿದ ಕಸವನ್ನೆಲ್ಲ ಒಂದು ಪ್ಲಾಸ್ಟಿಕ್ ಕೊಟ್ಟೆಯಲ್ಲಿ ಹಾಕಿ ಗೇಟಿನ ಹೊರಗೆ ಇಡುತ್ತಾ, ಹಾಲಿನ ಕೂಪನನ್ನು ಬ್ಯಾಗಿನಲ್ಲಿಟ್ಟು ಗೇಟಿಗೆ ನೇತುಹಾಕುತ್ತಿದ್ದರು.

ರಾತ್ರಿ ಒಂಬತ್ತು ಗಂಟೆಗೆ ಬಂದಿದ್ದರಿಂದ ಹೆಚ್ಚು ಜನ ಹಾಸ್ಟೆಲಿನಲ್ಲಿ ಊಟ ಮಾಡುತ್ತಿದ್ದರು. ನಾಳೆ ಭಾನುವಾರವಾದ್ದರಿಂದ ಬಹಳಷ್ಟು ಜನ ಬಂದಿರಲಿಲ್ಲ. ಶುಕ್ರವಾರ ಸಂಜೆಯಿಂದ ಆದಿತ್ಯವಾರ ಸಂಜೆಯವರೆಗೆ ಎಪ್ಪತ್ತು ಕಿಲೋಮೀಟರ್ ದೂರವಿರುವ ತೋಟದ ಮನೆಗೆ ಹೋಗುವ ವಾರ್ಡನ್ ಇರಲಿಲ್ಲ ಮತ್ತು ಅವರ ಮನೆಯ ದೀಪವೂ ನಂದಿತ್ತು. ಸೆಕ್ಯುರಿಟಿಗೆ ವಯಸ್ಸಾಗಿದ್ದರಿಂದ ಅಷ್ಟಕ್ಕಷ್ಟೆ. ಬಶೀರ 'ನಾನು ಮುಂದೆ ಹೋಗುತ್ತೇನೆ. ನೀನು ಒಂದಿಪ್ಪತ್ತು ಮೀಟರ್ ದೂರದಿಂದ ನನ್ನ ಹಿಂದೆ ಬರುತ್ತಿರು' ಎನ್ನುತ್ತ ಮುಂದೆ ನಡೆದ. 'ನೀವು ಮುಂದೆ ಹೋಗಿ. ನಾನು ನಿಮ್ಮ ಸಂಗಡ ಬರುವುದಿಲ್ಲ' ಎನ್ನುತ್ತ ಶಿರ್ಕ್ಯ ಗೇಟ್ ಒಳಗೆ ಬರಲಿಲ್ಲ.

ಹಾಸ್ಟೆಲ್ ಕಂಪೌಂಡಿಗಿರುವುದು ಒಂದೇ ಗೇಟ್. ಹೊಕ್ಕಿದೊಡನೆ ಸಿಗುವುದು ವಾಲಿಬಾಲ್ ಆಡುವಷ್ಟು ದೊಡ್ಡ ಜಾಗದ ಮೈದಾನ. ಅದರ ಹಿಂದೆ ಒಂದಾದ ಮೇಲೊಂದು ಎ, ಬಿ ಮತ್ತು ಸಿ ಬ್ಲಾಕ್. ಮೊದಲೇ ಸಿಗುವ ಮೈದಾನದ ಬಲ ಭಾಗದಲ್ಲಿ ವಾರ್ಡನ್, ಅಡುಗೆ ಭಟ್ಟರ ಕ್ವಾಟ್ರರ್ಸ್. 'ಸಿ' ಬ್ಲಾಕಿಗೆ ಹೋಗುವ ಜನ 'ಎ' ಬ್ಲಾಕ್ ದಾಟೇ ಹೋಗಬೇಕು.

ಪಂಕಜಳನ್ನು ಕರೆದುಕೊಂಡು ತನ್ನ ಫ್ರೆಂಡ್ ಮನೆಗೆ ಹೋಗುವ ಪ್ಲಾನ್ ಉಲ್ಟಾ ಆಗಿದ್ದರಿಂದ ಗಾಬರಿಗೊಂಡ ಬಶೀರ ಪೂರ್ತಿ ಹಿಂದೆ ಮತ್ತು ಯಾರೂ ಹೆಚ್ಚು ಓಡಾಡದೇ ಇರುವ 'ಸಿ' ಬ್ಲಾಕಿನಲ್ಲಿ ವ್ಯವಸ್ಥೆ ಮಾಡಿ ಯಾವುದೇ ಕಾರಣಕ್ಕೂ ನೀನು ಹೊರಗೆ ಹೋಗಬಾರದು ಎಂದು ಉಚ್ಚೆಹೊಯ್ದು ಮುಖ ತೊಳೆದುಕೊಂಡು ಬರಲು ಹೊರಗೆ ಬಂದ. ಬಶೀರ ಒಳಗೆ ಬಂದು ಹದಿನೈದು ನಿಮಿಷವಾಗಿರಲಿಲ್ಲ. ಆಗಲೇ ಇಬ್ಬರು ಪೊಲೀಸರು 'ಎ' ಬ್ಲಾಕಿನ ದ್ವಾರದಲ್ಲಿ ಬಂದು ನಿಂತು 'ಇಲ್ಲಿ ಯಾರೋ ಇಬ್ಬರು ಹುಡುಗರು ಸೂಳೆ ಕರೆದುಕೊಂಡು ಬಂದಿದ್ದಾರಂತೆ' ಎಂದು ಚಿಕ್ಕ ಧ್ವನಿಯಲ್ಲಿ ಹೇಳಿದರು. ಆಗಷ್ಟೇ ಊಟ ಮುಗಿಸಿ ದಿನಪತ್ರಿಕೆ, ವಾರಪತ್ರಿಕೆ ಇತ್ಯಾದಿ ತಿರುವಿ ಹಾಕುತ್ತಿದ್ದ ಹುಡುಗರೆಲ್ಲಾ ಒಮ್ಮೆಲೆ ಪೊಲೀಸರ ಮಾತುಕೇಳಿ ಅವಾಕ್ಕಾದರು. ಅಲ್ಲಿದ್ದವರಲ್ಲಿ ಹೆಚ್ಚಿನವರು ಆಗಷ್ಟೆ ಕಾಲೇಜು ಸೇರಿದವರಾದ್ದರಿಂದ ಮತ್ತಷ್ಟು ಹೆದರಿಕೊಂಡರು.

ಪೊಲೀಸರು ಹಾಸ್ಟೆಲಿಗೆ ಬರುವುದು ಹೊಸತೇನಲ್ಲ. ಕಲಿತು ಮುಗಿಯುತ್ತಿದ್ದಂತೇ ವಿದೇಶಕ್ಕೆ ಹೋಗಲಿ ಬಿಡಲಿ ಪಾಸ್‌ಪೋರ್ಟ್ ಮಾಡಿಸುವುದು ರೇಶನ್ ಕಾರ್ಡಷ್ಟೇ ಮುಖ್ಯವೆಂದು ಅಂದುಕೊಂಡ ಎಲ್ಲರೂ ಪಾಸ್‌ಪೋರ್ಟಿಗೆ ಅಪ್ಲೈ ಮಾಡುತ್ತಿದ್ದರಿಂದ ಪೊಲೀಸ್ ವೆರಿಫಿಕೇಶನ್ನಿಗೆ ಬರುತ್ತಿದ್ದರು. ಅವರು ಯಾರೂ ಇವರಲ್ಲ ಮತ್ತು ರಾತ್ರಿ ಬರುವವರೂ ಅಲ್ಲ. ಈ ಸಂದರ್ಭದಲ್ಲಿ ಪೊಲೀಸರ ಎದುರಿಗೆ ಸಿಕ್ಕಿದ್ದೇ ಆರಾಧ್ಯ. ಹಾಸ್ಟೆಲಿಗೆ ಸೇರಿ ಎರಡು ವರ್ಷವಾಗಿದ್ದರೂ ಪೊಲೀಸರ ಈ ಮಾತನ್ನು ಜೀರ್ಣಿಸಿಕೊಳ್ಳಲಾಗಲಿಲ್ಲ. 'ಸರ್ ಇಲ್ಲ ಸಾರ್ ಆ ಥರದವರು ಯಾರೂ ಇಲ್ಲ. ಮತ್ತೆ ಈ ಕಾಲೇಜ್ ಹಾಸ್ಟೆಲ್ ತುಂಬಾ ಸ್ಟ್ರಿಕ್ಟ್' ಎಂದ. ಆರಾಧ್ಯ ಮಾತ್ರ ತುಂಬಾ ಹೆದರಿದ್ದ. ಮೊನ್ನೆಯಷ್ಟೇ ಕಷ್ಟಪಟ್ಟು ಅರ್ಧ ಫೀಸ್ ಕಟ್ಟಿದ್ದ ಅವನ ತಲೆಯಲ್ಲಿ ಮಾತ್ರ ನಾಳೆ ಈ ವಿಷಯ ಟ್ಯಾಬ್ಲಾಯ್ಡ್ ಪತ್ರಿಕೆಗಳಲ್ಲಿ ಬಂದರೆ, ನಮ್ಮನ್ನೆಲ್ಲಾ ಕಾಲೇಜಿಂದ ಹೊರಹಾಕಿದರೆ, ತಂದೆತಾಯಿ ಹೆಸರು ಹಾಳಾದರೆ ಎಂದೆಲ್ಲಾ ತಲೆಯಲ್ಲಿ ಒತ್ತಿ ಒತ್ತಿ ಬರುತ್ತಿತ್ತು. ಪೊಲೀಸರು ಮಾತ್ರ 'ಎ' ಬ್ಲಾಕನ್ನೂ ದಾಟಿ 'ಬಿ' ಬ್ಲಾಕಿನ